## ಇಲ್ಲಿಯವರೆಗೆ



ದಮಯಂತಿ ತನ್ನ ಮಕ್ಕಳಿಗೆ ರೆಡಿಮೇಡ್ ಫುಡ್ ತಿನ್ನಿಸುತ್ತಾಳೆ. ಮನೆಯ ಅಡುಗೆಯನ್ನು ಮಕ್ಕಳು ಮುಟ್ಟುವುದೇ ಇಲ್ಲ. ತೇಜಸ್‌ನ ಮಕ್ಕಳದ್ದೂ ಅದೇ ಕಥೆ. ಇದನ್ನು ನೋಡಿ ಕೃಷ್ಣ 'ತನ್ನ–ಸಾವಿತ್ರಿಯ ಅನ್ಯೋನ್ಯತೆಯ ಅರ್ಧದಷ್ಟಾದರೂ ಮಕ್ಕಳಲ್ಲಿ ಇರಬೇಡವೇ, ಎಂಥ ನತದೃಷ್ಟ ಮಕ್ಕಳು' ಎಂದು ಮರುಗುತ್ತಾನೆ. ದಮಯಂತಿಗೆ ವಿಚ್ಛೇದನ ಆದ ತಕ್ಷಣ ಬೆಂಗಳೂರಿಗೆ ಬರಲು ಹೇಳುತ್ತಾನೆ. ಅಮೆರಿಕದಲ್ಲಿ ಹಣ ಸಿಗುತ್ತದೆ ಆದರೆ ನಮ್ಮ ಮಕ್ಕಳನ್ನು ನಮ್ಮಿಂದ ಕಿತ್ತುಕೊಂಡು ಬಿಡುತ್ತೆ ಎಂಬ ಅಭಿಪ್ರಾಯ ಇವರದು. ಹಾಗೆ ದಿನಗಳು ಉರುಳುತ್ತವೆ. ತೇಜಸ್ ಅಮೆರಿಕದಿಂದ ಬಂದು ಹದಿನೈದು ದಿನ ಇದ್ದು ರಾಮಚಂದ್ರನ ಮನೆಗೆ, ಸರೋಜಳ ಮನೆಗೆ ಊರಿಗೂ ಹೋಗಿ ಮತ್ತೆ ಬಾಂಬೆ ಮೂಲಕ ಅಮೆರಿಕಕ್ಕೆ ವಾಪಸ್ ಹೋಗುತ್ತಾನೆ.

ಇತ್ತ ಪ್ರೊ.ಗುರುನಾಥ್ ಮದ್ಯಪಾನ ಮಾಡುತ್ತಾ ಕುಳಿತಿರುತ್ತಾರೆ. ಕೃಷ್ಣನನ್ನು ಕರೆದು 'ನನ್ನ ಕಥೆ ನೀನು ಕೇಳ್ಬೇಕು. ನನ್ನ ಕಥೆ ನಿನಗೆ ಹೇಳದೆ ಸತ್ತು ಹೋಗ್ಬಿಟ್ಟರೆ ಅನಂತರ ಯಾರಿಗೆ ಹೇಳುವುದಕ್ಕೆ ಸಾಧ್ಯ? ನೀನು ತುಂಬಾ ಒಳ್ಳೆಯವನು. ನಿಮ್ಮ ಅಪ್ಪ ಅಮ್ಮ ಇನ್ನೂ ಒಳ್ಳೆಯವರು. ಎಲ್ಲಕ್ಕಿಂತ ನೀನು ನನಗೆ ಅಳಿಯ ಆಗಿದ್ದಕ್ಕೆ ನಾನು ತುಂಬಾ ಅದೃಷ್ಟ ಮಾಡಿದ್ದೆ ಪ್ರೊಫೆಸರ್ ಕೃಷ್ಣ' ಎನ್ನುತ್ತಾರೆ.

ಜನರು, ಊರಿನ ಜನ ನನ್ನ ಹಿಂದೆ ಮುಂದೆ ಮೆರವಣಿಗೆಯಲ್ಲಿ ಸಾಗಿ ಬರುತ್ತಿದ್ದರು. ಮಧ್ಯೆ ಮಧ್ಯೆ ಅಲ್ಲಲ್ಲಿ ನಿಲ್ಲಿಸಿ ಪಟಾಕಿಗಳನ್ನು ಹೊತ್ತಿಸಿ ಸದ್ದು ಮಾಡುತ್ತಿದ್ದರು. ಆಗ ನಾನು ಭಾರೀ ಭೀತಿಗೆ ಒಳಗಾಗಿ ಬಿಡುತ್ತಿದ್ದೆ. ಜೊತೆಗೆ ಸಾಯಂಕಾಲದಿಂದಲೇ ತಮಟೆ ಇನ್ನಿತರ ವಾದ್ಯಗಳ ಒಂದೇ ಸದ್ದು. ಪರವಾಗಿಲ್ಲ ನನ್ನ ಸಾವಿನ ಮೆರವಣಿಗೆಯಲ್ಲಿ ಸಾಕಷ್ಟು ಜನರು ಸೇರಿದ್ದಾರೆ ಎಂದುಕೊಂಡೆ. ಆದರೆ ನನ್ನ ಮಕ್ಕಳು ನನ್ನ ಮರಿಮಕ್ಕಳು ನನ್ನನ್ನು ನೋಡಲು ಕೊನೆಗೂ ಬರಲೇ ಇಲ್ಲ. ಯಾರಾದರೂ ಮೊಬೈಲ್‌ನಲ್ಲಿರುವ ಅಥವಾ ವಾಟ್ಸ್‌ಆಪ್‌ನಲ್ಲಿರುವ ಅವರು ಚಿತ್ರಗಳನ್ನು ತೋರಿಸಿದ್ದರೆ ಕೊನೆ ಸಲ ನೋಡಿ ಕಣ್ಣು ತುಂಬಿಸಿಕೊಳ್ಳುತ್ತಿದ್ದೆ. ಅದೂ ನೆರವೇರಲಿಲ್ಲ. ಬಹುಶಃ ನಾನು ಮತ್ತೆ ಅವರನ್ನು ಎಂದಿಗೂ ನೋಡುವ ಅವಕಾಶ ದೊರಕುವುದಿಲ್ಲ. ನಾನು ಹುಟ್ಟಿಬಂದ ಮಣ್ಣಿನ ಕಡೆಗೆ ಹೊರಟುಬಿಟ್ಟೆ. ಈಗ ನನಗಿದ್ದ ಒಂದೇ ಒಂದು ಆಸೆ ಎಂದರೆ ನನ್ನ ತಂದೆ ತಾಯಿ, ಅಜ್ಜ ಅಜ್ಜಿಯನ್ನು ನೋಡುವ ಆಸೆ. ಅವರನ್ನೂ ಸಹ ನಾನು ಸಂಧಿಸುತ್ತೇನೊ ಇಲ್ಲವೊ ಗೊತ್ತಿಲ್ಲ. ಬಹುಶಃ ನನ್ನ ಇಹಲೋಕದ ಕೊನೆ ದಿನ ಇದೇ ಇರಬೇಕು?

***

ನಾನು ಹುಟ್ಟಿ ಬೆಳೆದು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ನನ್ನನ್ನು ನೋಡಿದ್ದ ಕೆಲವು ಹಳೆ ಮನೆಗಳು ನನ್ನನ್ನ ದೂರ ನಿಂತು ನೋಡುತ್ತಿದ್ದವು. ನಾನು ಆಡಿ ಬೆಳೆದದ್ದನ್ನು ನೋಡಿದ ಮರಗಳು ನಿಂತುಕೊಂಡು ನನಗೆ ವಿದಾಯ ಹೇಳುತ್ತಿದ್ದವು. ದೂರದಲ್ಲಿ ಕಾಣುತ್ತಿದ್ದ ಬೆಟ್ಟಗುಡ್ಡಗಳು ಎಂದಿನಂತೆಯೇ ನನಗೆ ವಿಸ್ಮಯದಿಂದ ಕಾಣಿಸುತ್ತಿದ್ದವು. ನನ್ನನ್ನು ಹೊತ್ತುಕೊಂಡು ಸಾಗಿದ್ದ ನಮ್ಮವರು ಮಸಣಕ್ಕೆ ಅನತಿ ದೂರದಲ್ಲಿದ್ದ ರುದ್ರಭೂಮಿಯಲ್ಲಿದ್ದ ಸಣ್ಣ ಗುಡಿಯ ಸುತ್ತಲೂ ನನ್ನ ಚಟ್ಟವನ್ನು ಎತ್ತಿಕೊಂಡು ಮೂರು ಸುತ್ತಾಕಿ ಗುಡಿಯ ಮುಂದೆ ಇಳಿಸಿದರು. ಅಲ್ಲೊಂದು ಸಣ್ಣ ಪೂಜೆಯನ್ನು ಮಾಡಲಾಯಿತು. ಅನಂತರ ಅಲ್ಲಿಂದ ಮತ್ತೆ ನನ್ನ ಚಟ್ಟವನ್ನು ಎತ್ತಿಕೊಂಡ್ಹೋಗಿ ನನ್ನನ್ನು ಸಮಾಧಿ ಮಾಡುವ ಗುಂಡಿಯ ಪಕ್ಕದಲ್ಲಿ ಇಳಿಸಿ ಮತ್ತೆ ಪೂಜೆಯನ್ನು ಮಾಡಲಾಯಿತು. ನನಗೆ ಹೊದಿಸಿದ್ದ ಬಟ್ಟೆಗಳ ಸಮೇತ ನನ್ನನ್ನು ಗುಂಡಿಗೆ ಇಳಿಸಲಾಯಿತು. ನನ್ನ ಕೈಯಲ್ಲಿದ್ದ ಒಂದು ಬಂಗಾರದ ಉಂಗುರ ಮತ್ತು ಒಂದು ಕೈಗಡಿಯಾರವನ್ನು ಯಾರೋ ನನ್ನ ಕೈಯಿಂದ ಕಸಿದುಕೊಂಡಿದ್ದರು.

`ಯಾರಾದರೂ ಇನ್ನು ಮುಖ ನೋಡದೆ ಇದ್ದರೆ, ಬಂದು ನೋಡಿ ಬಿಡಿ' ಎಂದರು. ಈಗ ಎಲ್ಲರೂ ಮತ್ತೊಮ್ಮೆ ಗುಂಡಿಯಲ್ಲಿದ್ದ ನನ್ನ ಮುಖವನ್ನು ಬಗ್ಗಿ ನೋಡಿದರು. ಈಗ ನನ್ನ ಪತ್ನಿಯ ಕೈಯಿಂದ ಮೊದಲಿಗೆ ನನ್ನ ಮೇಲೆ ಹಿಡಿ ಮಣ್ಣನ್ನು ಹಾಕಿಸಲಾಯಿತು. ಸಾವಿತ್ರಿ ನನ್ನ ದೇಹದ ಮೇಲೆ ಒಂದು ಹಿಡಿ ಮಣ್ಣನ್ನು ಎತ್ತಿ ಹಾಕಲಾರದೇ ಹಾಕಿ ಹಾಗೇ ಹಿಂದಕ್ಕೆ ಕುಸಿದು ಬೀಳುವ ಮೊದಲೇ ನನ್ನ ತಮ್ಮನ ಪತ್ನಿ ಮತ್ತು ಸರೋಜ ಹಿಡಿದು ಕೂರಿಸಿದರು. ಪಾಪ! ಸಾವಿತ್ರಿಯ ಪರಿಸ್ಥಿತಿ ಮುಂದಿನ ದಿನಗಳು ಹೇಗಿರುತ್ತವೊ ಏನೊ? ನಾನು, ನನ್ನ ಪತ್ನಿ ಸಾವಿತ್ರಿ ಹೆಚ್ಚು ಕಾಲ ಒಟ್ಟಾಗಿ ಬದುಕುತ್ತಾ ಹೋದಂತೆ ಒಬ್ಬರನ್ನೊಬ್ಬರು ಬಿಡಲಾರದೇ ನಮ್ಮ ನಡುವೆ ಪ್ರೀತಿ ಮತ್ತು ಒಲುಮೆ ಒಂದಾಗಿ ಹೋಗಿತ್ತು. ಆದರೆ ನನ್ನ ಪತ್ನಿಯ ಪ್ರೀತಿ ಮತ್ತು ಒಲುಮೆಯನ್ನು ಪಡೆಯಲು ಈ ಕ್ಷಣದಿಂದ ಅವಳ ಎದುರಿಗೆ ನಾನು ಇಲ್ಲದೆ ಹೋದೆ. ಒಂದು ರಾತ್ರಿ ಸಾವಿತ್ರಿಯ ಕನಸಿನಲ್ಲಿ ತೇಜಸ್, ಸಾವಿತ್ರಿಯನ್ನು ವೃದ್ಧಾಶ್ರಮಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಬಂದಂತೆ ಕನಸು ಕಂಡ ಸಾವಿತ್ರಿ ಆ ರಾತ್ರಿ ನನ್ನನ್ನು ಕುರಿತು `ರೀ ಕೃಷ್ಣ ನನಗೊಂದು ಆಸೆ ಇದೇರಿ' ಎಂದಿದ್ದಳು. ನಾನು `ಇಷ್ಟೊತ್ತು ರಾತ್ರಿಯಲ್ಲಿ ಅದ್ಯಾವ ಕನಸು ನಿನ್ನದು?' ಎಂದಿದ್ದಕ್ಕೆ `ನಿಮಗಿಂತ ಮೊದಲು ನಾನು ಸಾಯಬೇಕು ಎನ್ನುವುದು' ಎಂದಿದ್ದಳು. ಪಾಪ! ಆದರೆ ಅವಳ ಆಸೆ ನೆರವೇರಲಿಲ್ಲ. ಕೊನೆಗೂ ಅವಳು ವಯಸ್ಸಾದ ಕಾಲದಲ್ಲಿ